2020 ಕ.ತೀ.ವ 1126

(ಕಲಬುರಗಿ ಪೀಠ)

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್

## ವಿನಾಯಕ್ ಮತ್ತು ಇತರರು -ವಿರುದ್ಧ- ಕರ್ನಾಟಕ ರಾಜ್ಯ, ಗಾಂಧಿ ಚೌಕ ಪೋಲೀಸ್ ಠಾಣೆ, ವಿಜಯಪುರ*

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿನ ಕ್ರಿಮಿನಲ್ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ತಮ್ಮ ವಿರುದ್ಧ ಹೂಡಲಾದ ದೋಷಾರೋಪಣಾ ಪಟ್ಟಿಯಲ್ಲಿ ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವನೆಂಬ ಆರೋಪವನ್ನು ತಿದ್ದುಪಡಿ ಮೂಲಕ ಸೇರಿಸಲು ದಂಡ ಪ್ರಕ್ರಿಯಾ ಸಂಹಿತೆಯ 216ನೇ ಪ್ರಕರಣದ ಅಡಿಯಲ್ಲಿ ಅಭಿಯೋಜಕರು (ಪ್ರಾಸಿಕ್ಯೂಟರ್) ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿದ ಕ್ರಮವನ್ನು ಪ್ರಶ್ನಿಸಿ ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

ಸದರಿ ಪ್ರಕರಣದಲ್ಲಿ ವ್ಯಕ್ತಿಯನ್ನು ಕೊಲ್ಲಲಾಗಿದೆ ಎನ್ನುವುದು ಪ್ರಾಸಿಕ್ಯೂಷನ್ ಮೊಕದ್ದಮೆಯಲ್ಲ. ಈ ಕಾರಣದಿಂದ ಅಧಿವಿಚಾರಣಾ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 216ನೇ ಪ್ರಕರಣದ ಅಡಿಯಲ್ಲಿ ಅಭಿಯೋಜಕರು ಸಲ್ಲಿಸಿದ ಅರ್ಜಿಯನ್ನು ಯಾಂತ್ರಿಕವಾಗಿ ಪುರಸ್ಕರಿಸಿದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿದೆ.

*ಕ್ರಿಮಿನಲ್ ಅರ್ಜಿ ಸಂಖ್ಯೆ: 201439/2019, ದಿನಾಂಕ 28ನೇ ನವೆಂಬರ್, 2019.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

1. *ಎಐಆರ್ 2011 ಎಸ್‌ಸಿ 568*
   *ರಾಜ್‌ಬೀರ್ ಅಲಿಯಾಸ್ ರಾಜು ಮತ್ತು ಇನ್ನೊಬ್ಬರು –ವಿರುದ್ಧ– ಹರಿಯಾಣ ರಾಜ್ಯ* *(ಉಲ್ಲೇ) 6*
2. *(2013) 7 ಎಸ್‌ಸಿಸಿ 256*
   *ಜಸ್ವಿಂದರ್ ಸೈನಿ ಮತ್ತು ಇತರರು –ವಿರುದ್ಧ– ರಾಜ್ಯ (ದೆಹಲಿಯ ಎನ್‌ಸಿಟಿ ಸರ್ಕಾರ)* *(ಉಲ್ಲೇ) 6*

ಅರ್ಜಿದಾರರ ಪರ : ಶ್ರೀ ಎಸ್. ಎಸ್. ಮಮದಾಪುರ, ನ್ಯಾಯವಾದಿ.
ಪ್ರತ್ಯರ್ಜಿದಾರರ ಪರ : ಶ್ರೀ ಮಕಬೂಲ್ ಅಹ್ಮದ್, ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್**:

ಪ್ರತಿವಾದಿ ರಾಜ್ಯದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ನೋಟೀಸನ್ನು ಸ್ವೀಕರಿಸಿದ್ದಾರೆ.

2. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ಮತ್ತು ಪ್ರತಿವಾದಿ–ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯದ ಪ್ಲೀಡರ್‌ಗಳಿಬ್ಬರ ವಾದಗಳನ್ನು ನಾನು ಆಲಿಸಿದ್ದೇನೆ.

3. IIIನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ವಿಜಯಪುರ ಇವರು ಎಸ್.ಸಿ. ಸಂಖ್ಯೆ: 130/ 2015ರಲ್ಲಿ ಹೊರಡಿಸಿದ ದಿನಾಂಕ: 31.10.2019ರ ಆದೇಶವನ್ನು ರದ್ದುಪಡಿಸಲು ಈ ಅರ್ಜಿಯನ್ನು ಸಲ್ಲಿಸಲಾಗಿದೆ.

4. ಅರ್ಜಿದಾರರನ್ನು ಕ್ರಮವಾಗಿ 1ರಿಂದ 3ನೇ ಸಂಖ್ಯೆಗಳ ಆರೋಪಿಗಳನ್ನಾಗಿ ದೋಷಾರೋಪ ಮಾಡಲಾಗಿದೆ. ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾಗುವ 498–ಎ, 304–ಬಿ ಪ್ರಕರಣಗಳ ಅಡಿಯಲ್ಲಿ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 4ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಆರೋಪ ಪಟ್ಟಿಯನ್ನು ದಾಖಲಿಸಲಾಗಿದೆ. ಮೇಲೆ ಹೇಳಿದ ಆರೋಪಗಳ ಸಂಬಂಧದಲ್ಲಿ ಮಾನ್ಯ ಸತ್ರ ನ್ಯಾಯಾಧೀಶರು ದಿನಾಂಕ: 04.07.2016ರ ಆದೇಶದ ಮೂಲಕ ಆರೋಪಗಳನ್ನು ರೂಪಿಸಿದ್ದಾರೆ. ವಿಚಾರಣೆ ಇತ್ಯರ್ಥದಲ್ಲಿದ್ದಾಗ, ಮಾನ್ಯ ಸರ್ಕಾರಿ ಅಭಿಯೋಜಕರು (ಪ್ರಾಸಿಕ್ಯೂಟರ್), ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಹತ್ಯೆಯ ಆರೋಪವನ್ನು ಒಳಗೊಂಡು ಆರೋಪವನ್ನು ತಿದ್ದುಪಡಿ ಮಾಡಲು ದಂಡ ಪ್ರಕ್ರಿಯಾ ಸಂಹಿತೆಯ 216ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಸದರಿ ಅರ್ಜಿಗೆ, ಪ್ರತಿವಾದಿ ನ್ಯಾಯವಾದಿಗಳು ಆಕ್ಷೇಪಣೆಯ ಹೇಳಿಕೆಯನ್ನು ಸಲ್ಲಿಸಿದ್ದಾರೆ.

5. ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ಹೆಚ್ಚುವರಿ ಆರೋಪವನ್ನು ರೂಪಿಸಲು ದಂಡ ಪ್ರಕ್ರಿಯಾ ಸಂಹಿತೆಯ 216ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಮಾನ್ಯ ಸತ್ರ ನ್ಯಾಯಾಧೀಶರು ದಿನಾಂಕ: 31.10.2019ರ ಆದೇಶದ ಮೂಲಕ ಪುರಸ್ಕರಿಸಿದ್ದಾರೆ. ಸದರಿ ಆದೇಶದಿಂದ ಬಾಧಿತರಾಗಿ 1ರಿಂದ 3ನೇ ಸಂಖ್ಯೆಗಳ ಆರೋಪಿಗಳು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದಾರೆ.

6. ಸಾಕಷ್ಟು ಸಾಕ್ಷ್ಯವಿಲ್ಲದೆ ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ಹೆಚ್ಚುವರಿ ಆರೋಪಗಳನ್ನು ರೂಪಿಸುವುದಕ್ಕೆ ಅರ್ಜಿಯನ್ನು ಪುರಸ್ಕರಿಸಲು ವಿಚಾರಣಾ ನ್ಯಾಯಾಲಯವು ಯಾಂತ್ರಿಕವಾಗಿ ಕ್ರಮ ಜರುಗಿಸಿದೆ ಎಂದು ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ. ವಿಚಾರಣಾ ನ್ಯಾಯಾಲಯವು,

1. ಎಐಆರ್ 2011 ಎಸ್‌ಸಿ 568

***ರಾಜ್‌ಬೀರ್ ಅಲಿಯಾಸ್ ರಾಜು ಮತ್ತು ಇನ್ನೊಬ್ಬರು –ವಿರುದ್ಧ– ಹರಿಯಾಣ ರಾಜ್ಯ***[1] ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ. ಆದಾಗ್ಯೂ, ವರದಿ ಮಾಡಿದ ***ಜಸ್ವಿಂದರ್ ಸೈನಿ ಮತ್ತು ಇತರರು –ವಿರುದ್ಧ– ರಾಜ್ಯ (ದೆಹಲಿಯ ಎನ್‌ಸಿಟಿ ಸರ್ಕಾರ)***[2] ಮೊಕದ್ದಮೆಯಲ್ಲಿನ ತರುವಾಯದ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾನೂನಿನ ನಿಲುವನ್ನು ಸ್ಪಷ್ಟೀಕರಿಸಿದೆ. ಮೃತಳು ನೇಣು ಹಾಕಿಕೊಂಡು ಸತ್ತಿದ್ದಾಳೆ ಮತ್ತು ನೇಣು ಹಾಕಿಕೊಂಡ ಪರಿಣಾಮವಾಗಿ ಉಸಿರು ಕಟ್ಟಿದ ಕಾರಣದಿಂದಾಗಿ ಮರಣ ಸಂಭವಿಸಿದೆ ಎಂದು ಮರಣೋತ್ತರ ಪರೀಕ್ಷಾ ವರದಿಯಿಂದ ಸಹ ತಿಳಿದುಬರುತ್ತದೆ ಎಂಬುದು ಸ್ವತಃ ಪ್ರಾಸಿಕ್ಯೂಷನ್ ಮೊಕದ್ದಮೆಯಾಗಿದೆ ಎಂದು ಅವರು ವಾದಿಸಿದ್ದಾರೆ. ಏನೇ ಇರಲಿ, ಪ್ರಥಮ ಮಾಹಿತಿ ವರದಿಯಲ್ಲಾಗಲಿ ಅಥವಾ ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ಆರೋಪ ರೂಪಿಸಲು ತನಿಖಾವಧಿಯಲ್ಲಿ ದಾಖಲಿಸಿದ ಸಾಕ್ಷಿಗಳ ಹೇಳಿಕೆಗಳಲ್ಲಾಗಲಿ ಯಾವುದೇ ಆರೋಪವಿರಲಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ. ತದನುಸಾರವಾಗಿ, ಅವರು ಅರ್ಜಿಯನ್ನು ಪುರಸ್ಕರಿಸಲು ಕೋರಿದ್ದಾರೆ.

7. ಇದಕ್ಕೆ ತದ್ವಿರುದ್ಧವಾಗಿ, ***ರಾಜ್‌ಬೀರ್ ಮೊಕದ್ದಮೆಯಲ್ಲಿ (ಮೇಲೆ ಹೇಳಿದ)*** ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳ ಹಿನ್ನೆಲೆಯಲ್ಲಿ, ವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ಹೆಚ್ಚುವರಿ ಆರೋಪವನ್ನು ರೂಪಿಸಲು ಮುಂದಾಗಿದೆ ಎಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ವಾದಿಸಿದ್ದಾರೆ. ತೀರ್ಪು ನೀಡುವ ಮೊದಲು ಯಾವುದೇ ಸಮಯದಲ್ಲಾದರೂ ಆರೋಪಗಳನ್ನು ಬದಲಾಯಿಸಬಹುದು ಮತ್ತು ತನ್ನನ್ನು ಸಮರ್ಥಿಸಿಕೊಳ್ಳಲು ಆರೋಪಿಗೆ ಸಾಕಷ್ಟು ಅವಕಾಶವನ್ನು ನೀಡಲಾಗುತ್ತದೆಯಾದ್ದರಿಂದ ಆತನಿಗೆ ಯಾವುದೇ ಬಾಧಕ ಉಂಟಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ. ಆದ್ದರಿಂದ, ಅರ್ಜಿಯನ್ನು ವಜಾಗೊಳಿಸಲು ಅವರು ಕೋರಿದ್ದಾರೆ.

---

2. (2013) 7 ಎಸ್‌ಸಿಸಿ 256

8. ಅಧೀನ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವನ್ನು ನಾನು ಅವಲೋಕಿಸಿದ್ದೇನೆ. ***ರಣಬೀರ್ ಮೊಕದ್ದಮೆಯಲ್ಲಿ (ಮೇಲೆ ಹೇಳಿದ)*** ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನವಲಂಬಿಸಿ, ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಮೇರೆಗೆ ಹೆಚ್ಚುವರಿ ಆರೋಪವನ್ನು ರೂಪಿಸಲು ದಂಡ ಪ್ರಕ್ರಿಯಾ ಸಂಹಿತೆಯ 216ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಮಾನ್ಯ ಸತ್ರ ನ್ಯಾಯಾಧೀಶರು ಕ್ರಮ ಜರುಗಿಸಿದ್ದಾರೆ. ಸದರಿ ನಿರ್ಣಯದ ಕಂಡಿಕೆ–11ರಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮಹಿಳೆಯ ವಿರುದ್ಧದ ಹೇಯ ಮತ್ತು ಬರ್ಬರ ಅಪರಾಧಗಳಲ್ಲಿ ಮರಣ ದಂಡನೆಯನ್ನು ವಿಧಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟು, ಭಾರತ ದಂಡ ಸಂಹಿತೆಯ 304–ಬಿ ಪ್ರಕರಣದ ಆರೋಪಕ್ಕೆ ಭಾರತ ದಂಡ ಸಂಹಿತೆಯ 302ನೇ ಪ್ರಕರಣವನ್ನು ಸಾಮಾನ್ಯವಾಗಿ ಸೇರಿಸಲು ಎಲ್ಲಾ ವಿಚಾರಣಾ ನ್ಯಾಯಾಲಯಗಳಿಗೆ ನಿರ್ದೇಶಿಸಿದೆ.

9. ***ಜಸ್ವಿಂದರ್ ಸೈನಿ ಮೊಕದ್ದಮೆಯಲ್ಲಿ (ಮೇಲೆ ಹೇಳಿದ),*** ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಂಡಿಕೆ–14ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ:

> "14. ಅದು ಏನೇ ಆಗಿರಲಿ, ಎರಡೂ ಆದೇಶಗಳಲ್ಲಿರುವ ಸಾಮಾನ್ಯ ಅಂಶವೆಂದರೆ, ಈ ನ್ಯಾಯಾಲಯವು ರಾಜ್‌ಬೀರ್ ಮೊಕದ್ದಮೆಯಲ್ಲಿ, ಭಾರತ ದಂಡ ಸಂಹಿತೆಯ 304–ಬಿ ಪ್ರಕರಣದಿಂದ ಆರೋಪಿತನಾದ ಆರೋಪಿಯಾಗಿರುವ ಪ್ರತಿಯೊಂದು ಮೊಕದ್ದಮೆಯಲ್ಲಿ 302ನೇ ಪ್ರಕರಣದ ಅಡಿಯಲ್ಲಿನ ಆರೋಪವನ್ನು ಸೇರಿಸಲು ನಿರ್ದೇಶಿಸಿರುವುದಾಗಿದೆ. ನಮ್ಮ ಅಭಿಪ್ರಾಯದಲ್ಲಿ, ಈ ನ್ಯಾಯಾಲಯವು ಹೊರಡಿಸಿದ ಆದೇಶದ ನೈಜ ಉದ್ದೇಶ ಅದಾಗಿರಲಿಲ್ಲ. ಯಾಂತ್ರಿಕವಾಗಿ ಮತ್ತು ಮೊಕದ್ದಮೆಯಲ್ಲಿ ಲಭ್ಯವಿರುವ ಸಾಕ್ಷ್ಯದ ಸ್ವರೂಪಕ್ಕೆ ಯುಕ್ತ ಗಮನ ಹರಿಸದೆ ಅನುಸರಿಸಬೇಕೆಂಬುದು ಈ ನಿರ್ದೇಶನದ ಅರ್ಥವಲ್ಲ. ಈ ನ್ಯಾಯಾಲಯವು ಹೇಳಬಯಸಿದ್ದೇನೆಂದರೆ, ವರದಕ್ಷಿಣೆ ಸಾವಿನ

ಆರೋಪವನ್ನು ರೂಪಿಸಿ ಹೊರಿಸಿರುವ ಆರೋಪವಾಗಿರುವ ಮೊಕದ್ದಮೆಯಲ್ಲಿ, ಪುರಾವೆಯು ಅನ್ಯಥಾ ಅನುಮತಿಸಿದರೆ, 302ನೇ ಪ್ರಕರಣದ ಮೇರೆಗೆ ಸಹ ಆರೋಪವನ್ನು ರೂಪಿಸಬಹುದು ಎಂಬುದಾಗಿದೆ. ಈ ನ್ಯಾಯಾಲಯದ ಆದೇಶದಿಂದ ಇನ್ನಾವುದೇ ಅರ್ಥವನ್ನು ಊಹಿಸಲಾಗದು."

10. ***ರಾಜ್‌ಬೀರ್ ಮೊಕದ್ದಮೆಯಲ್ಲಿ (ಮೇಲೆ ಹೇಳಿದ),*** ಗಾಯುಗಳಿಂದ ಕಂಡುಬರುವಂತೆ ಅದು ಹೇಯ ಮತ್ತು ಬರ್ಬರ ಹತ್ಯೆಯ ಮೊಕದ್ದಮೆಯಾಗಿತ್ತೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ವೈದ್ಯರ ಸಾಕ್ಷ್ಯದಂತೆ, ಮೃತಳಿಗೆ ಹಲವಾರು ಗಾಯಗಳಾಗಿದ್ದವು. ಆದ್ದರಿಂದ, ಸಾಮಾನ್ಯ ಸ್ವರೂಪದಲ್ಲಿ ಮರಣ ಸಂಭವಿಸಲು ಪರ್ಯಾಪ್ತವಾಗಿರುವ, ಮರಣಪೂರ್ವದ ಸ್ವರೂಪದ್ದಾಗಿದ್ದ ಉಸಿರು ಕಟ್ಟಿಸಿದ್ದರಿಂದ ಮತ್ತು ಗಂಟಲು ಹಿಸುಕಿದ್ದರಿಂದ ಮರಣ ಉಂಟಾಗಿತ್ತೆಂದು ಅಭಿಪ್ರಾಯಪಡಲಾಯಿತು. ಇದಲ್ಲದೆ, ಮೇಲಿನ ಗಾಯಗಳು ಮೇಲ್ನೋಟಕ್ಕೆ ಮೃತಳಿಗೆ ಪದೇ ಪದೇ ಹೊಡೆಯಲಾಗಿತ್ತು ಮತ್ತು ಆಕೆಯ ಗಂಟಲನ್ನು ಹಿಸುಕಲಾಗಿತ್ತು ಎಂದು ಸೂಚಿಸುತ್ತವೆಂದು ಅಭಿಪ್ರಾಯಪಡಲಾಯಿತು.

11. ಪ್ರಸ್ತುತ ಮೊಕದ್ದಮೆಯಲ್ಲಿ, ಮೃತಳನ್ನು ಮರಣಕ್ಕೀಡು ಮಾಡಲಾಗಿತ್ತು ಎಂಬುದು ಪ್ರಾಸಿಕ್ಯೂಷನ್ ಮೊಕದ್ದಮೆಯಾಗಿರುವುದಿಲ್ಲ. ಪ್ರಾಸಿಕ್ಯೂಷನ್ ಪ್ರಕಾರ, ವರದಕ್ಷಿಣೆ ಬೇಡಿಕೆ ಸಂಬಂಧದಲ್ಲಿ ಮೃತಳಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದ ಕಾರಣದಿಂದ ಆಕೆಯು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಪ್ರಾಸಿಕ್ಯೂಷನ್ ಸಾಕ್ಷಿಗಳ ಹೇಳಿಕೆಗಳ ಅವಲೋಕನದಿಂದ, ಆರೋಪಿಯ ಮನೆಯ ಮೊದಲನೇ ಮಹಡಿಯಲ್ಲಿನ ಮಲಗುವ ಕೊಠಡಿಯ ಬಾಗಿಲಿನ ಚಿಲಕವನ್ನು ಒಳಗಿನಿಂದ ಹಾಕಿಕೊಳ್ಳಲಾಗಿತ್ತು ಮತ್ತು ಬಾಗಿಲನ್ನು ಒಡೆದು ತೆಗೆದಾಗ, ಮೃತಳು ನೇಣು ಹಾಕಿಕೊಂಡಿರುವುದು ಕಂಡುಬಂದಿತೆಂದು ತಿಳಿದುಬರುತ್ತದೆ. ಮರಣೋತ್ತರ ಪರೀಕ್ಷೆಯ ವರದಿಯ ಪ್ರಕಾರ, ನೇಣು ಬಿಗಿದ ಗುರುತಿನ ಹೊರತಾಗಿ ಮೃತ ಶರೀರದ ಮೇಲೆ ಬೇರಾವುದೇ ಗಾಯಗಳು ಕಂಡುಬಂದಿರುವುದಿಲ್ಲ.

12. ***ಜಸ್ವಿಂದರ್ ಸೈನಿ ಮೊಕದ್ದಮೆಯಲ್ಲಿ (ಮೇಲೆ ಹೇಳಿದ),*** ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಹತ್ಯೆಯೇ ಅಥವಾ ಭಾರತ ದಂಡ ಸಂಹಿತೆಯ 304–ಬಿ ಪ್ರಕರಣದ ಅಡಿಯಲ್ಲಿ ದಂಡನೀಯ ವರದಕ್ಷಿಣೆ ಮರಣವೇ ಎಂಬುದು ಸನ್ನಿವೇಶದ ಸಂಗತಿಯನ್ನು ಮತ್ತು ಮೊಕದ್ದಮೆಯಲ್ಲಿನ ಪುರಾವೆಯನ್ನು ಅವಲಂಬಿಸಿರುತ್ತದೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ. ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿನ ಆರೋಪವನ್ನು ಮೇಲ್ನೋಟಕ್ಕೆ ಸಮರ್ಥಿಸುವ ನೇರ ಅಥವಾ ಸಾಂದರ್ಭಿಕ ಸಾಕ್ಷ್ಯವಿದ್ದರೆ, ವಿಚಾರಣಾ ನ್ಯಾಯಾಲಯವು, ಖಂಡಿತವಾಗಿಯೂ ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ಹತ್ಯೆಯ ಆರೋಪವನ್ನು ರೂಪಿಸಬಹುದಿತ್ತು ಮತ್ತು ನಂತರ ಅದು ಮುಖ್ಯ ಆರೋಪವಾಗಿರುತ್ತಿತ್ತೇ ಹೊರತು ಬದಲಿ ಆರೋಪವಾಗುತ್ತಿರಲಿಲ್ಲ. ವಿಚಾರಣೆಯಲ್ಲಿ ಆರೋಪಿಯ ವಿರುದ್ಧ ಹತ್ಯೆಯ ಮುಖ್ಯ ಆರೋಪವು ಸಾಬೀತಾಗದಿದ್ದರೆ, ಭಾರತ ದಂಡ ಸಂಹಿತೆಯ 304–ಬಿ ಪ್ರಕರಣದ ಅಡಿಯಲ್ಲಿ ದಂಡನೀಯ ವರದಕ್ಷಿಣೆ ಮರಣದ ಬದಲಿ ಆರೋಪ ಸಾಬೀತಾಗಿದೆಯೇ ಎಂಬುದನ್ನು ನಿರ್ಧರಿಸುವ ಸಾಕ್ಷ್ಯದ ಕಡೆಗೆ ನ್ಯಾಯಾಲಯವು ಗಮನ ಹರಿಸಬಹುದಾಗಿದೆ. ಈ ಎರಡೂ ಆರೋಪಗಳನ್ನು ರೂಪಿಸುವ ಒಳಾಂಶಗಳು ಬೇರೆಯಾಗಿದ್ದು, ಆ ಮೂಲಕ ಈ ಒಳಾಂಶಗಳಿಗೆ ಸುಸಂಗತವಾದ ದೃಷ್ಟಿಕೋನದಿಂದ ಸಾಕ್ಷ್ಯದ ಗುಣಾರ್ಹತೆಗಳನ್ನು ಕುರಿತು ತಗಾದೆ ಮಾಡಬಹುದು.

13. ***ಜಸ್ವಿಂದರ್ ಸೈನಿ ಮೊಕದ್ದಮೆಯಲ್ಲಿ (ಮೇಲೆ ಹೇಳಿದ)*** ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 216ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ಯಾಂತ್ರಿಕವಾಗಿ ಪುರಸ್ಕರಿಸುವುದು ಸಮರ್ಪಕವಾಗಿಲ್ಲ. ವಿಚಾರಣಾ ನ್ಯಾಯಾಲಯವು, ಈ ಮೊಕದ್ದಮೆಯಲ್ಲಿ ಮುಂದಿಟ್ಟ ಸಾಕ್ಷ್ಯದ ಕಡೆಗೆ ಗಮನ ಹರಿಸದೆ ಯಾಂತ್ರಿಕವಾಗಿ ಕ್ರಮ ಜರುಗಿಸಿದೆ. ಆದ್ದರಿಂದ ಪ್ರಶ್ನಿತ ಆದೇಶವು ಕಾನೂನಿನ ಪ್ರಕಾರ ಸಮರ್ಥಿತವಾಗಿರುವುದಿಲ್ಲ.

14. ಆದಾಗ್ಯೂ, ತೀರ್ಪಿಗೆ ಮುಂಚಿನ ಯಾವುದೇ ಹಂತದಲ್ಲಿ, ಪ್ರಶ್ನೆಯನ್ನು ಮರು–ಪರೀಕ್ಷಿಸುವ ಮೂಲಕ ನ್ಯಾಯಾಲಯದ ಮುಂದಿಟ್ಟ ಸಾಕ್ಷ್ಯದ ಮೊದಲ ನೋಟದ ಅಂದಾಜಿನ ಆಧಾರದ ಮೇಲೆ ಆರೋಪದ ಬದಲಾವಣೆಗೆ ಕೋರಲು ಪ್ರಾಸಿಕ್ಯೂಷನ್ ಮುಕ್ತವಾಗಿದೆ. ಹಾಗೆ ಮಾಡುವಾಗ, ವಿಚಾರಣಾ ನ್ಯಾಯಾಲಯವು, ***ಜಸ್ವಿಂದರ್ ಸೈನಿ ಮೊಕದ್ದಮೆಯಲ್ಲಿ (ಮೇಲೆ ಹೇಳಿದ)*** ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಮತ್ತು ಸದರಿ ನಿರ್ಣಯದಲ್ಲಿ ನೀಡಲಾದ ನಿರ್ದೇಶನಗಳ ಮೂಲಕ ಮೊಕದ್ದಮೆಯನ್ನು ಅಂದಾಜಿಸತಕ್ಕದ್ದು.

ಮೇಲೆ ಹೇಳಿದ ಅಭಿಪ್ರಾಯಗಳೊಂದಿಗೆ, ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ. IIIನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ವಿಜಯಪುರ ಇವರು ಎಸ್.ಸಿ. ಸಂಖ್ಯೆ: 130/2015ರಲ್ಲಿ ಹೊರಡಿಸಿದ ದಿನಾಂಕ: 31.10.2019ರ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದೆ.

ಇತ್ಯರ್ಥದಲ್ಲಿದ್ದ ಐ.ಎ. ಸಂಖ್ಯೆ: 1/2019ನ್ನು ವಿಲೆ ಮಾಡಲಾಗಿದೆ.